(ಇ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು 29ನೇ ಪಟ್ಟಿಯಲ್ಲಿರುವ

ಅಧ್ಯಕ್ಷರು :- ದಿನಾಂಕ 21.07.2003 ರ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 13 ಉತ್ತರಗಳನ್ನು ಹಾಗೂ ತಡೆಹಿಡಿಯಲಾದ 3 ಪ್ರಶ್ನೆಗಳ ಉತ್ತರವನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 121 ಪ್ರಶ್ನೆಗಳ ಪೈಕಿ 107 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ **(ಅನುಬಂಧ - I)**

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, 31ನೇ ಪಟ್ಟಿಯಲ್ಲಿರುವ ದಿನಾಂಕ: 22.07.2003 ಲಿಖಿತ ಮೂಲಕ ಉತ್ತರಿಸುವ 116 ಪ್ರಶ್ನೆಗಳ ಪೈಕಿ 84 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. **(ಅನುಬಂಧ - II)**

ಅಧ್ಯಕ್ಷರು :- ಮಂಡಿಸಲಾಯಿತು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ :- ರಾಜ್ಯದ ಕಬ್ಬು ಬೆಳೆಗಾರರಿಗೆ ಕೇಂದ್ರ ಸರ್ಕಾರವು ನೆರವು ಒದಗಿಸುವ ಬಗ್ಗೆ

+ ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) :- ಮಾನ್ಯ ಅಧ್ಯಕ್ಷರೆ, ಇವತ್ತು ರಾಷ್ಟದ ಉದ್ದಗಲಕ್ಕೂ ಕೇರಳದಿಂದ ಉತ್ತರ ಪ್ರದೇಶದ ವರೆಗೆ ರಾಷ್ಟದ ಬಹುತೇಕ ಕಡೆ ಶೇಕಡಾ 80ಕ್ಕೂ ಹೆಚ್ಚಿನ ಭಾಗ ಕೃಷಿಯನ್ನು ಅವಲಂಬಿಸಿರತಕ್ಕ ರೈತರಲ್ಲಿ ಬಹುತೇಕ ಜನ ಕಬ್ಬನ್ನು ಬೆಳೆಯುತ್ತಿರತಕ್ಕಂಥದ್ದು ನಮಗೆಲ್ಲಾ ಕೂಡ ಗೊತ್ತಿರುವಂತಹ ವಿಷಯ. ಕರ್ನಾಟಕ ರಾಜ್ಯದಲ್ಲಿಯೂ ಕೂಡ ಸಣ್ಣ, ಮಧ್ಯಮ ಹಾಗೂ ದೊಡ್ಡ ರೈತರು ಕೂಡ ಈ ಕಬ್ಬನ್ನು ಬೆಳೆಯತಕ್ಕಂಥದ್ದನ್ನು ಬಹಳ ಹಿಂದಿನಿಂದ ಕೃಷಿಯನ್ನು ಮಾಡಿಕೊಂಡು ಬರುತ್ತಿದ್ದಾರೆ. ಕಬ್ಬು ಬೆಳೆಗಾರರು ಯಾವುದೇ ಒಂದು ತಾಂತ್ರಿಕತೆಯ ಸಹಾಯವಿಲ್ಲದೇ ಈ ಒಂದು ಕೃಷಿಯನ್ನು ಅವರು ತಮ್ಮದೇ ಆದಂತಹ ಒಂದು ಸಾಂಪ್ರದಾಯಕ ಮಾದರಿಯಲ್ಲಿ ಈ ಕೃಷಿಯನ್ನು ನಂಬಿಕೊಂಡು ಇವತ್ತು ಜೀವನ ಮಾಡುತ್ತಿದ್ದಾರೆ. ಅನೇಕ ರೈತರು ತಮ್ಮ ಜೀವನೋಪಾಯಕ್ಕೋಸ್ಕರ ಈ ಕೃಷಿಯನ್ನು ನಂಬಿಕೊಂಡಿರತಕ್ಕಂಥದ್ದು ಬಹುಶಃ ಈ ಸದನದಲ್ಲಿರತಕ್ಕ ಬಹುತೇಕ ಎಲ್ಲಾ ಸದಸ್ಯರಿಗೂ ಕೂಡ ಗೊತ್ತಿರುವಂತಹ ವಿಷಯ. ಇಂತಹ ಕಬ್ಬು ಬೆಳೆಗಾರರು ಇವತ್ತು ಸಂಕಷ್ಟಕ್ಕೆ ಸಿಕ್ಕಿರತಕ್ಕಂಥದ್ದು ಒಂದು ನಿರ್ವಿವಾದಂತಹ ಸಂಗತಿ. ದೇಶದ ಉದ್ದಗಲಕ್ಕೆ ಈ ಕಬ್ಬು ಬೆಳೆಯನ್ನು ನಂಬಿಕೊಂಡು ಜೀವನವನ್ನು ಸಾಗಿಸುತ್ತಿರುವಂಥ ಕಬ್ಬುಬೆಳೆಗಾರ, ಕಬ್ಬು ಬೆಳೆಯುವಂತಹ ರೈತ ಇವತ್ತು ಸಂಕಷ್ಟಕ್ಕೆ ಸಿಲುಕಿದ್ದಾನೆ. ಈ ರೈತನ ನೆರವಿಗೆ ಬರತಕ್ಕಂಥಹ ಕೆಲಸವನ್ನು ಸರ್ಕಾರಗಳು ಮಾಡಬೇಕಾಗುತ್ತದೆ. ಸಕ್ಕರೆ ಕಾರ್ಖಾನೆ ರೋಗಗ್ರಸ್ಥವಾದರೆ, ಅದರ ನೇರವಾದಂತಹ ಪರಿಣಾಮ ಈ ಒಂದು ಕೃಷಿ, ಕಬ್ಬು ಬೆಳೆ ಬೆಳೆಯುವಂತಹ ರೈತರ ಮೇಲೆ ಬೀಳತ್ತಿದೆ. ಸಕ್ಕರೆ ಫ್ಯಾಕ್ಟರಿ ಮುಚ್ಚಿದರೂ ರೈತರಿಗೇ ತೊಂದರೆ ಸಕ್ಕರೆ ಫ್ಯಾಕ್ಟರಿ ನಷ್ಟದಲ್ಲಿ ಅನುಭವಿಸುತ್ತಿದ್ದರೂ ಕೂಡ ಅದು ರೈತರಿಗೆ ತೊಂದರೆ, ಸಕ್ಕರೆ ಫ್ಯಾಕ್ಟರಿಯವರು ಸರಿಯಾಗಿ ಹಣವನ್ನು ಪಾವತಿ ಮಾಡದೇ ಇದ್ದರೆ ಅದೂ ಕೂಡ ರೈತರಿಗೆ ನೇರವಾಗಿ ತೊಂದರೆ. ಹೀಗೆ ಈ ರೋಗಗ್ರಸ್ಥ ಕಾರ್ಖಾನೆಗಳು ಇಡೀ ದೇಶದ ಉದ್ದಗಲಕ್ಕೂ ಇದೆ. ರೈತರನ್ನು ಈ ಒಂದು ಕೃಷಿಯನ್ನು ನಂಬಿಕೊಂಡಿರತಕ್ಕಂಥ, ಕಬ್ಬನ್ನು ಬೆಳೆಯುತ್ತಿರತಕ್ಕಂಥ ರೈತರನ್ನು ಸಂಕಷ್ಟಕ್ಕೆ ಸಿಲುಕುತ್ತಿರುವುದನ್ನು ನೋಡುತ್ತೇವೆ. ಆ ರೈತ ಕಣ್ಣೀರನ್ನು ಹರಿಸತಕ್ಕದ್ದನ್ನು ನಾವು ದಿನನಿತ್ಯ ಕೂಡ ನೋಡುತ್ತಿದ್ದೇವೆ. ಬಹುತೇಕವಾಗಿ ಕಬ್ಬನ್ನು ಬೆಳೆಯುತ್ತಿರತಕ್ಕವರು ಸಣ್ಣ ರೈತರು. ತಮ್ಮ ಜೀವನೋಪಾಯಕ್ಕೋಸ್ಕರವೇ

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಗಳನ್ನು ಪುರಸ್ಕರಿಸಿಲ್ಲವೆಂದು ಸೂಚಿಸುತ್ತದೆ.)